ಏನಾದರೂ ಏಪರ್ಾಡಿ ಮಾಡಬೇಕೆಂದು ಹೇಳಿದ್ದಾರೆ. ಮತ್ತೆ ಈಗಿರುವ ಪೂರ್ಣ ಕಟ್ಟಡವನ್ನು ತೆಗೆದು ಹೊಸ ಕಟ್ಟಡ ನಿರ್ಮಿಸಬೇಕೆಂದು ಹೇಳಿದ್ದಾರೆ. ಈ ಮೈಸೂರು ಸ್ಪಿನ್ನಿಂಗ್ ಮಿಲ್ ಮೊದಲು ಪಾಸಗೀ ಕ್ಷೇತ್ರದಲ್ಲಿ ಇದ್ದ ಒಂದು ಕಾರ್ಖಾನೆ. ಹಿಂದೆ ಈ ಕಾರ್ಖಾನೆಯು ಬಾಗಿಲು ಮುಚ್ಚಿದ್ದರಿಂದ ನಾನು ಹಿಂದೆ ಕೈಗಾರಿಕಾ ಮಂತ್ರಿ ಆಗಿದ್ದ ಸಮಯದಲ್ಲಿ ಕೇಂದ್ರಕ್ಕೆ ಬರೆದು ಇದನ್ನು ಎನ್.ಟಿ.ಸಿಗೆ ವಹಿಸಬೇಕೆಂದು ಶಿಫಾರಸ್ಸು ಮಾಡಿದ್ದೆ. ಆ ಪ್ರಕಾರ ಈ ಕಂಪನಿಯನ್ನು ಎನ್.ಟಿ.ಸಿಯವರು ತೆಗೆದುಕೊಂಡು ಅವರು ನಡೆಸುತ್ತಿದ್ದಾರೆ. ಆದರೆ ಈಗ ಆ ಫ್ಯಾಕ್ಟರಿ ಎನ್.ಟಿ.ಸಿಯ ಪ್ರಾಪರ್ಟಿ. ಅಥವಾ ಪರೋಕ್ಷವಾಗಿ ಇದು ಕೇಂದ್ರ ಸರ್ಕಾರದ ಆಸ್ತಿ ಎಂದೂ ಸಹ ನಾವು ಹೇಳಬಹುದು. ಇಲ್ಲಿ ನಾವು ನೇರವಾಗಿ ಯಾವರೀತಿ ಪ್ರವೇಶ ಮಾಡಬೇಕೆನ್ನುವುದು ನನಗೆ ಕಾಣುತ್ತಿಲ್ಲ. ಏಕೆಂದರೆ ಆ ಆಸ್ತಿ ನಮ್ಮದಲ್ಲ. ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು. ಸಮಸ್ಯೆಯನ್ನು ಬಗೆಹರಿಸತಕ್ಕವರು ಕೇಂದ್ರ ಸರ್ಕಾರದವರು ಮತ್ತು ಎನ್.ಟಿ.ಸಿ. ಅವರು ಇದ್ದಾರೆ. ಮುಂದೆ ಏನು ಮಾಡಬೇಕೆನ್ನುವ ತೀರ್ಮಾನವನ್ನು ತೆಗೆದುಕೊಳ್ಳುವವರು ಅವರೇ. ಆದರೆ ನಾವು ಎನ್.ಟಿ.ಸಿ.ಯವರಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಬರೆಯಬಹುದು. ಏನು ತೊಂದರೆಗಳಿವೆ ಅವುಗಳನ್ನು ಪರಿಹಾರ ಮಾಡಲಿಕ್ಕೆ ಅಲ್ಲಿನ ಕಾರ್ಮಿಕರಿಗೆ ಯಾವುದೇ ವಿಧವಾದ, ತೊಂದರೆಯಾಗದ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ ಯೆಂದು ನಾವು ಬರೆಯಬಹುದು. ನಾವು ಬರೆಯುತ್ತೇವೆ. ಮಾನ್ಯ ಸದಸ್ಯರು ಅಲ್ಲಿ ವಿಸ್ಚೀಫ್ ಆಗಿದೆ ಯೆಂದು ಹೇಳಿದ್ದಾರೆ, ಅದರ ಬಗ್ಗೆ ಇನ್ವೆಸ್ಟಿಗೇಷನ್ ಮಾಡಿಸುತ್ತೇವೆ ಅದರ ಸತ್ಯಾಂಶ ಏನು ಎನ್ನುವುದನ್ನು ನಾವು ತಿಳಿದುಕೊಳ್ಳುತ್ತೇವೆ. ಮತ್ತೆ ಪ್ರಮುಖ್ಯವಾಗಿ ನಮ್ಮ ಜೀವರಾಜ ಆಳ್ವರವರು, ಎಲ್ಲಿರತಕ್ಕ ಪೂರ್ಣ ಹಳೆಯ ಕಟ್ಟಡವನ್ನು ನೆಲಸಮ ಮಾಡಿ ಹೊಸ ಕಟ್ಟಡ ಮಾಡಬೇಕೆಂದು ಹೇಳಿದ್ದಾರೆ. ಟೆಕ್ಸ್‌ಟೈಲ್ಸ್ ಫ್ಯಾಕ್ಟರಿಯನ್ನು ಹೊಸದಾಗಿ ಮಾಡಬೇಕಾದರೆ, ಹಳೆಯ ಯಂತ್ರಗಳನ್ನೆಲ್ಲ ತೆಗೆದು ಬಿಸಾಡಿ ಹೊಸದಾಗಿರತಕ್ಕ ಆಟೋಮೆಟಿಕ್ ಲೂಮ್ಸ್ ಆಗಲಿ ಸ್ಪಿನ್ನಿಂಗ್ ಆಗಲಿ ಲೇಟೇಸ್ಟ್ ಎಕ್ಯುಪ್‌ಮೆಂಟ್ಸ್‌ಗಳನ್ನು ಹಾಕಬೇಕಾದರೆ ಸುಮಾರು ೪೦-೫೦ ಕೋಟಿ ರೂಪಾಯಿಗಳಿಂತ ಕಡಿಮೆ ಯಾಗುವುದಿಲ್ಲ. ಈಗ ಅವರು ಹೊಸದಾಗಿ ಹಾಕಬೇಕೆಂದು ಏನು ಸಲಹೆ ಕೊಟ್ಟಿದ್ದಾರೆ. ಅಷ್ಟು ಬಂಡವಾಳ ಹಾಕುವುದಕ್ಕೆ ಎನ್.ಟಿ.ಸಿ.ಯವರಿಗೆ ಸಾಧ್ಯವಿಲ್ಲ. ತಮಗೆ ಗೊತ್ತಿರುವ ಹಾಗೆ, ಎನ್.ಟಿ.ಸಿ.ಗೆ ಅಕ್ಯುಮಿಲೇಟೆಡ್ ಲಾಸ್ ಈಗ ಸುಮಾರು ೫೦೦ ಕೋಟಿಗಿಂತ ಜಾಸ್ತಿಯಾಗಿದೆ. ಅವರು ಪ್ರತಿವರ್ಷವೂ ಲಾಸ್ ಮಾಡಿಕೊಂಡು ಲಾಸ್‌ನಲ್ಲಿ ರನ್ ಮಾಡುತ್ತಿದ್ದಾರೆ. ಆದ್ದರಿಂದ ಅವರು ಮಾಡಲಿಕ್ಕಾಗುವುದಿಲ್ಲ. ನಾನು ಸಲಹೆ ಮಾಡುವುದೇನೆಂದರೆ, ನನ್ನ ಅನುಭವದಲ್ಲಿ ಹೇಳುವುದಾದರೆ, ಬಹಳ ಕ್ರೌಡೆಡ್ ಜಾಗದಲ್ಲಿ ಈ ಫ್ಯಾಕ್ಟರಿ ಇದೆ. ಈ ಫ್ಯಾಕ್ಟರಿಯನ್ನು ಅಲ್ಲಿಂದ ತೆಗೆದು ಆ ಜಾಗವನ್ನು ಹರಾಜು ಮಾಡಿದರೆ ಸುಮಾರು ೫೦ ಕೋಟಿ, ೬೦ ಕೋಟಿ ಅಥವಾ ೭೦ ಕೋಟಿ ಬರಬಹುದು. ಆ ಹಣವನ್ನು ಉಪಯೋಗಿಸಿ ಕೊಂಡು ಸಿಟಿಯಿಂದ ಹೊರಗಡೆ ಒಳ್ಳೆಯ ಮಾಡ್ರನ್ ಟೆಕ್ಸ್‌ಟೈಲ್ ಮಿಲ್ ಹಾಕುವುದಾದರೆ ಬಹಳ ಸೂಕ್ತವಾದೀತು. ಆದ್ದರಿಂದ ಮುಂದೆ ಆಗತಕ್ಕ ನಷ್ಟ ತಪ್ಪುತ್ತದೆ. ಒಳ್ಳೆಯ ಮಾಡ್ರನ್ ಟೆಕ್ಸ್‌ಟೈಲ್ ಮಿಲ್ ಹಾಕಿದರೆ ಒಳ್ಳೆಯ ಕ್ವಾಲಿಟಿ ಬಟ್ಟೆಗಳನ್ನು ತಯಾರಿಸಬಹುದು. ಅವುಗಳನ್ನು ಎಕ್ಸ್‌ಪೋರ್ಟ್ ಮಾಡಬಹುದು. ಕಡಿಮೆ ಕಾಸ್ಟ್‌ನಲ್ಲಿ ಒಳ್ಳೆಯ ಬಟ್ಟೆಯನ್ನು ತಯಾರು ಮಾಡಬಹುದು. ಈ ವಿಚಾರವನ್ನು ಎಕ್ಸಾಮಿನ್ ಮಾಡಿ ಎಂದು ಎನ್.ಟಿ.ಸಿ.ಗೆ ಮತ್ತು ಕೇಂದ್ರಸರ್ಕಾರಕ್ಕೆ ನಾವು ಬರೆಯುತ್ತೇವೆ.

iii) ಚಾಮರಾಜನಗರ ಹಾಗೂ ರಾಮಸಮುದ್ರದಲ್ಲಿ ಕಂಡಿಯುವ ನೀರಿನ ಅಭಾವವನ್ನು ನೀಗಿಸಲು ಕಾವೇರಿ ಯೋಜನೆಯನ್ನು ತ್ವರಿತವಾಗಿ ಕೈಗೊಳ್ಳುವ ಬಗೆ

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ಹಾಗೂ ರಾಮಸಮುದ್ರದಲ್ಲಿ ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಕಾವೇರಿ ಯೋಜನೆಯನ್ನು ತ್ವರಿತವಾಗಿ ಕೈಗೊಳ್ಳುವ ಬಗ್ಗೆ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ (ಹೊಸಕೋಟೆ ಸಚಿವರು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಪ್ರಸ್ತುತ ಚಾಮರಾಜನಗರದ ಜನಸಂಖ್ಯೆಯು ಸುಮಾರು ೫೦,೦೦೦ವಾಗಿರುತ್ತದೆ. ಈ ನಗರಕ್ಕೆ ನೀರು ಸರಬರಾಜನ್ನು ಸುಮಾರು ೮ ಕಿ. ಮೀ. ದೂರದಲ್ಲಿರುವ ಸುವರ್ಣಾವತಿ ನದಿಯ ನೀರು ಮೂಲ ಸ್ಥಾವರವಾಗಿರುತ್ತದೆ. ಇದಲ್ಲದೆ ಸುಮಾರು ೫೦ ಕೊಳವೆ ಬಾವಿಗಳ ಇಳುವರಿಯು ಮೇರೆಗೆ

ವಿದ್ಯುತ್ ರೇಚಕಗಳನ್ನು ಹಾಗೂ ಕೈ ಪಂಪುಗಳನ್ನು ಅಳವಡಿಸಿ ನೀರನ್ನು ಪಡೆಯಲಾಗುತ್ತಿದೆ. ಸುಪಾರು ೫೮.೦೦ ಲಕ್ಷ ರೂಗಳ ಯೋಜನೆಯನ್ನು ಕಾರ್ಯಗತಗೊಳಿಸಿ ವಿತರಣಾ ವ್ಯವಸ್ಥೆಯನ್ನು ಹಾಗೂ ವಿಭಾಗೀಯ ಜಲಸಂಗ್ರಾಹಣಾಗಾರ, ಪಂಪಿಂಗ್ ಯಂತ್ರಗಳು ಹಾಗೂ ಜಾಕ್‌ವೆಲ್ ಇನ್‌ಫಿಲ್ಟ್ರೇಷನ್ ವೆಲ್‌ಗಳನ್ನು ಅಭಿವೃದ್ಧಿಗೊಳಿಸಲಾಗಿದೆ.

ಕಳೆದ ೪, ೫ ವರ್ಷಗಳಿಂದ ಮಳೆ ಸರಿಯಾಗಿ ಆಗುತ್ತಿಲ್ಲದ ಕಾರಣ ಸುವರ್ಣಾವತಿ ನದಿಗೆ ಸಾಕಷ್ಟು ನೀರು ಬೇಸಿಗೆಯಲ್ಲಿ ಹರಿದು ಬರುತ್ತಿಲ್ಲ. ಒಂಬತ್ತು ಸಲ ಸಂಪೂರ್ಣ ಬತ್ತಿ ಹೋಗಿರುತ್ತದೆ. ಆದ ಕಾರಣ ಯೋಜಿಸಲಾದ ೧೦ ೦೦ ಲಕ್ಷ ಗ್ಯಾಲನ್ ಬದಲಿ ಪ್ರತಿ ದಿನ ಕೇವಲ ೩ರಿಂದ ೪ ಲಕ್ಷ ಗ್ಯಾಲನ್ ಈ ಬೇಸಿಗೆಯ ಕಾಲದಲ್ಲಿ ಕೊಡಲಾಗುವುದು. ನದಿಯಲ್ಲಿ ನೀರಿದ್ದಾಗ ಪ್ರತಿ ದಿನ ೨೦ರಿಂದ ೩೦ ಲೀಟರ್ ನೀರನ್ನು ತಲಾ ಒಂದರಂತೆ ಒದಗಿಸಲಾಗುತ್ತಿದೆ. ನೀರಿಲ್ಲದಾಗ ದಿವಸಕ್ಕೆ ತಲಾ ೮ರಿಂದ ೧೦ ಲೀಟರ್ ನೀರನ್ನು ಒದಗಿಸಲಾಗುತ್ತಿದೆ. ನಗರವು ಬೇಗ ಬೆಳೆಯುತ್ತಿರುವುದರಿಂದ ಶಾಶ್ವತ ನೀರಿನ ಮೂಲದಿಂದ ಈ ನಗರಕ್ಕೆ ನೀರನ್ನು ಒದಗಿಸುವ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಆದ್ದರಿಂದ ೬೦೫ ಲಕ್ಷ ರೂಪಾಯಿಗಳ ಅಂದಾಜನ್ನು ಸುಪಾರು ೨೬.೦೦ ಕಿ. ಮೀ. ದೂರದ ಕಾವೇರಿ ನದಿಯಿಂದ ಚಾಮರಾಜನಗರ ಮತ್ತು ದಾರಿಯುದ್ದಕ್ಕೂ ಇರುವ ೨೩ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸಲು ತಯಾರಿಸಲಾಗಿದೆ ಭಾರತ ಜಿ ವ ನಿಗಮದಿಂದ ೫೦.೦೦ ಕೋಟಿ ರೂಪಾಯಿಗಳ ಸಾಲ ಧನ ಸಹಾಯ ಯೋಜನೆಯಡಿಯಲ್ಲಿ ಈ ಕೆಲಸವನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಈ ಪದರಿ ೨೩ ಗ್ರಾಮಗಳ ಕೊಳವೆ ಬಾವಿಗಳಿಂದ ಬರುವ ನೀರು ಸಹ ಬೆಹಳ ಕಬಿಮೆಯಾಗಿರುವುದರಿಂದ ಇಲ್ಲಿಯೂ ಕುಡಿಯುವ ನೀರಿನ ಬವಣೆಯಾಗಿದೆ. ಆದ್ದರಿಂದ ಈ ಗ್ರಾಮಗಳನ್ನು ಸಹ ಈ ಯೋಜನೆಯಲ್ಲಿ ಅಳವಡಿಸಲಾಗಿದೆ.

ಈ ಯೋಜನೆಯು ಮಂಜೂರಾತಿಗೋಸ್ಕರ ಸರ್ಕಾರದ ಪರಿಶೀಲನೆಯಲ್ಲಿದೆ.

೧-೧೦ ಪಿ. ಎಂ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೇ, ಈ ಚಾಮರಾಜನಗರ ತಾಲ್ಲೂಕು ಕರ್ನಾಟಕ ರಾಜ್ಯದ ಗಡಿ ತಾಲ್ಲೂಕಾಗಿದೆ. ಈ ಗಡಿ ತಾಲ್ಲೂಕಿನ ಅಭಿವೃದ್ಧಿ ಬಗ್ಗೆ ನಾನು ಅನೇಕ ಸಾರಿ ಸರ್ಕಾರದ ಗಮನ ಸೆಳೆದಿದ್ದೇನೆ. ಮತ್ತು ಮಾನ್ಯ ಅಧ್ಯಕ್ಷರನ್ನು ಸಹಿತ ಈ ತಾಲ್ಲೂಕಿಗೆ ಬಯಮಾಡಿಸಬೇಕು. ಅಲ್ಲಿನ ಪರಿಸ್ಥಿತಿಯನ್ನು ನೋಡಬೇಕು. ನೋಡಿ ಸರ್ಕಾರಕ್ಕೆ ತಾವು ಒಂದು ಪತ್ರವನ್ನು ಬರೆಯಬಹುದು, ಒಂದು ವರದಿಯನ್ನು ಕೊಡಬಹುದು ಮತ್ತು ತಾವಾದರೂ ಸಭೆಯಲ್ಲಿ ತಿಳಿಸಬಹುದು ಎಂದು ಈಗಾಗಲೇ ಮನವಿ ಮಾಡಿದ್ದೇನೆ. ಮತ್ತು ಸಂದರ್ಭ ಬಂದಾಗ ಆದಷ್ಟು ಅತಿ ಶೀಘ್ರದಲ್ಲಿ ತಮ್ಮನ್ನು ನಾನು ಕರೆದುಕೊಂಡು ಹೋಗುತ್ತೇನೆ. ಇವತ್ತು ಈ ತಾಲ್ಲೂಕಿನಲ್ಲಿ ವರ್ಷಕ್ಕೆ ೯ ತಿಂಗಳು, ೧೦ ತಿಂಗಳು ಮಳೆ ಇರುವುದಿಲ್ಲ. ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸುವರ್ಣಾವತಿ ಡ್ಯಾಮ್‌ನಿಂದ ಆಗಬೇಕು. ಅಲ್ಲಿಯ ಕೆರೆಯಿಂದ ನೀರು ಬರಬೇಕು. ಸುವರ್ಣಾವತಿಗೆ ನೀರು ಬರಬೇಕಾದರೆ ಚಿಕ್ಕೋಳೆ ಅಂತ ಇನ್ನೊಂದಿದೆ. ಆ ಚಿಕ್ಕೋಳೆಗೆ ನೀರು ಬರಬೇಕಾದರೆ ತಮಿಳುನಾಡಿನಲ್ಲಿ ಮಳೆ ಬೀಳಬೇಕು. ತಾಳವಾಡಿ ಗಡಿ ಪ್ರದೇಶದಲ್ಲಿ ಮಳೆ ಬಿದ್ದರೆ ಮಾತ್ರ ಇಲ್ಲಿಗೆ ನೀರು ಬರುತ್ತದೆ. ಅಲ್ಲಿ ಮಳೆ ಬೀಳದಿದ್ದರೆ ಚಿಕ್ಕೋಳೆಗೆ ನೀರು ಇಲ್ಲ. ಸುವರ್ಣಾವತಿಗೂ ನೀರು ಇಲ್ಲ. ಮತ್ತು ಅಲ್ಲಿಂದ ಕುಡಿಯುವ ನೀರು ಚಾಮರಾಜನಗರದ ತನಕ ಬರುವ ಪ್ರಶ್ನೆಯೇ ಇಲ್ಲ. ಕಳೆದ ಒಂಭತ್ತು ತಿಂಗಳು ಕಾಲ ಚಾಮರಾಜನಗರದ ಜನತೆ ಒಂದೇ ರೀತಿ ಬಹಳ ತೊಂದರೆಯಿಂದ ಪರಿತಪಿಸುತ್ತಿದ್ದಾರೆ. ತಮಗೆ ಹೇಳುವುದಾದರೆ ಅಲ್ಲಿ ನಿನ್ನೆ ಇಡೀ ದಿನ ಕುಡಿಯುವುದಕ್ಕೆ ನೀರು ಇಲ್ಲ. ಅಂದರೆ ಒಂದು ತಿಂಗಳಲ್ಲಿ ಕನಿಷ್ಟ ೧೫ ದಿನಗಳ ಕಾಲ ಕುಡಿಯುವ ನೀರು ಇಲ್ಲ ಎನ್ನುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ಮತ್ತು ಕುಡಿಯುವ ನೀರು ಇಲ್ಲವೆಂದು ಬೇರೆ ಲಾರಿಗಳಲ್ಲಿ ನೀರು ಕೊಡೋಣ ಎಂದರೆ ತಮಗೆ ಮೊದಲೇ ಹೇಳಿದ ಹಾಗೆ, ಚಾಮರಾಜನಗರ ಮುನಿಸಿಪಾಲಿಟಿಯಲ್ಲಿ ಒಂದು ಕಸ ಹೊಡೆಯುವ ಪೊರಕೆಗೆ ದುಡ್ಡು ಇಲ್ಲ. ಅಂದ ಮೇಲೆ ಟ್ಯಾಂಕರ್ ಮತ್ತು ಇನ್ನೊಂದು ಲಾರಿಗೆ ೩ ಲಕ್ಷ ಕೊಡುವುದಕ್ಕೆ ಅವರ ಹತ್ತಿರ ದುಡ್ಡು ಇಲ್ಲ ಈ ಪರಿಸ್ಥಿತಿ ಇರುವಾಗ ಜನ ಎಲ್ಲಿಂದ ನೀರು ತರಬೇಕು? ಬೇರೆ ಕಡೆಲೆ ಬಾವಿಗಳು ಅಥವಾ ಕೊಳವೆ ಬಾವಿಗಳ ಬಗ್ಗೆ ತಮಗೆ ಹೇಳಬೇಕೆಂದರೆ. ಕರ್ನಾಟದಲ್ಲೇ ಚಾಮರಾಜನಗರದಲ್ಲಿ ನೀರಾವರಿ ಪಂಪುಸೆಟ್ಟುಗಳು ಹೆಚ್ಚು ಇರತಕ್ಕದ್ದು. ಅರೂವರೆ ಸಾವಿರ ನೀರಾವರಿ ಪಂಪುಸೆಟ್ಟುಗಳು ಇವೆ. ಅಲ್ಲಿಂದಲಾದರೂ ನೀರು ತರೋಣ ಎಂದರೆ ಅಲ್ಲಿಯೂ ಸಹಿತ ನೀರು ಇಲ್ಲ. ಸುಪಾರು ಎರಡೂವರೆ–ಮೂರು ಸಾವಿರ ಪಂಪುಸೆಟ್ಟುಗಳು ಅಲ್ಲಿ ನೀರು ಇಲ್ಲದೆ ಒಣಗಿ ಹೋಗಿವೆ. ಇಷ್ಟೊಂದು ಭೀಕರ ವಾದಂಥ ಪರಿಸ್ಥಿತಿ ಇರುವಾಗ ತಾವು ಇದನ್ನು ಅರಿತುಕೊಂಡು ಕಾವೇರಿ ಯೋಜನೆಯನ್ನು ಪರಿಶೀಲಿಸು

ತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಕಾವೇರಿ ಯೋಜನೆಯನ್ನು ತಾವು ತಂದು ಇಲ್ಲಿಗೆ ಶಾಶ್ವತವಾಗಿ ಯಾವುದೇ ತೊಂದರೆ ಇಲ್ಲದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಸುಮಾರು ಮೂರು-ನಾಲ್ಕು-ಐದು ವರ್ಷಗಳಿಂದ ಕಾವೇರಿ ನೀರಿನ ಯೋಜನೆಯನ್ನು ತನ್ನಿ ಎಂದು ಹೇಳುತ್ತಿದ್ದೇವೆ. ಇದು ಒಂದು ಕಂತಕ್ಕೆ ಬಂದಿದೆ ಎಂದು ತಾವು ತಿಳಿಸಿದ್ದೀರಿ. ಆದರೆ ಎಷ್ಟು ದಿವಸದೊಳಗೆ, ಎಷ್ಟು ತಿಂಗಳೊಳಗೆ ಕಾವೇರಿ ಯೋಜನೆಯನ್ನು ತಾವು ತರುತ್ತೀರಿ? ಮತ್ತು ಈ ಕಾವೇರಿ ಯೋಜನೆಯಿಂದ ಟಿ. ನರಸಿಪುರದಿಂದ ಚಾಮರಾಜನಗರಕ್ಕೆ ನೀರು ತರುವಾಗ ಮೂರು ತಾಲ್ಲೂಕುಗಳು ಸೇರುತ್ತವೆ. ಈ ಮೂರು ತಾಲ್ಲೂಕುಗಳು ಯಾವ್ಯಾವ ಹಳ್ಳಿಗಳಿಗೆ ಈ ನೀರಿನ ಉಪಯೋಗ ಆಗುತ್ತದೆ ಎನ್ನುವುದು ಒಂದು. ಮತ್ತು ಅಲ್ಲಿಯವರೆಗೆ ಅಂದರೆ ಕಾವೇರಿ ನೀರನ್ನು ತುದುಕೊಡುವವರೆಗೆ. ಈಗ ನೀರು ಸಿಗುತ್ತಿಲ್ಲ. ನೀರಿಲ್ಲದೆ ಜನ ಒಹಳ ತೊಂದರೆಯಲ್ಲಿದ್ದಾರೆ. ಅಲ್ಲಿಯವರೆಗೆ ಏನಾದರೂ ಸರ್ಕಾರದಿಂದ ಇಲ್ಲಿಂದಲೇ ಲಾರಿಗಳಲ್ಲಿ ನೀರು ಕಳಿಸುತ್ತೀರಾ? ಅಥವಾ ಬೇರೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ಎನ್ನುವುದನ್ನು ಕೂಡಲೇ ತಿಳಿಸಿ ಪ್ರತಿ ದಿನ ನೀರು ತರುವ ರೀತಿಯಲ್ಲಿ ವ್ಯವಸ್ಥೆ ಆಗಬೇಕು. ನಾವು ನೀರು ಪಂಪು ಮಾಡ ತಕ್ಕಂಥ ಸ್ಥಳಕ್ಕೆ ಹೋದರೆ ಅಲ್ಲಿ ಯಾವ ಅಧಿಕಾರಿಯೂ ಇರುವುದಿಲ್ಲ. ಆಮೇಲೆ ವಿದ್ಯುಚ್ಛಕ್ತಿ ಅಭಾವ ಇದೆ. ತಿಂಗಳಲ್ಲಿ ೨೦ ದಿವಸ ವಿದುಚ್ಛಕ್ತಿ ಅಭಾವ ದಿಂದ ತೊಂದರೆ ಇದೆ. ಬಹಳ ದುರಂತದಲ್ಲಿ ಒಹಳ ನರಕದಲ್ಲಿ. ಬಹಳ ತೊಂದರೆಯಲ್ಲಿ ಜನ ಇದ್ದಾರೆ. ಆದ್ದರಿಂದ ಈ ಜನರಿಗೆ ಒಂದು ಸಮಗ್ರವಾಗಿ ಸಂಪೂರ್ಣವಾಗಿ, ನೀರಿಗೆ ತೊಂದರೆಯಾಗದ ರೀತಿಯಲ್ಲಿ ತಮ್ಮ ಸರ್ಕಾರದ ನೀತಿಯ ಪ್ರಕಾರ, ಗಡಿ ತಾಲ್ಲೂಕುಗಳಿಗೆ ಆದ್ಯತೆ ಕೊಡುವ ನೀತಿಯ ಪ್ರಕಾರ ಇನ್ನು ಎಷ್ಟು ದಿವಸಗಳ ಒಳಗೆ ತಾವು ಈ ಕಾರ್ಯವನ್ನು ಕೈಗೊಳ್ಳುತ್ತೀರಿ ಎನ್ನುವುದನ್ನು ಸದನದ ಮುಂದೆ ಹೇಳಬೇಕೆಂದು ತಮ್ಮ ಮೂಲಕ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ,— ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರು ಚಾಮರಾಜ ನಗರದ ಜನತೆಯ ಕಷ್ಟದ ಬಗ್ಗೆ ಪೂರ್ಣವಾಗಿ ವಿವರಿಸಿದ್ದಾರೆ. ಈ ಕಷ್ಟ ಇದೆಯೆಂದು ತಿಳಿದುಕೊಂಡು ಸರ್ಕಾರ ವಾಟರ್ ಸಪ್ಲೈ ಅಂಡ್ ಸ್ಯೂಯರೇಜ್ ಬೋರ್ಡಿಗೆ ಹೇಳಿ ಅದಕ್ಕೆ ಒಂದು ಪ್ಲಾನ್ ಎಸ್ಟಿಮೇಟ್ ಹಾಕಿ ಅಲ್ಲಿಗೆ ಸಾಕಾದಷ್ಟು ನೀರನ್ನು ಕಾವೇರಿ ನದಿಯಿಂದ ಒದಗಿಸಿಕೊಡೋಣ ಎಂದು ಹೇಳಿದ ಮೇಲೆ ೬.೧೫ ಕೋಟಿ ರೂಪಾಯಿಗಳ ಯೋಜನೆ ತಯಾರಾಗಿದೆ. ಕಳೆದ ಆಗಸ್ಟ್ ತಿಂಗಳಲ್ಲಿ ರಾಜ್ಯಪಾಲರ ಆಡಳಿತ ಇದ್ದಂಥ ಕಾಲದಲ್ಲಿ ಎಲ್ ಐ.ಸಿ. ಚೇರ್ಮನ್ನರು ಮತ್ತು ವಾಟರ್ ಸಪ್ಲೈ ಬೋರ್ಡ್‌ನವರು ಹಾಗೂ ರಾಜ್ಯಪಾಲರ ಸಲಹೆಗಾರರು ಎಲ್ಲ ಸೇರಿಕೊಂಡು ಇದರ ಬಗ್ಗೆ ಚರ್ಚೆ ನಡೆಸಿದರು. ಚರ್ಚೆ ನಡೆಸಿದ ಕಾಲದಲ್ಲಿ ಎಲ್. ಐ. ಸಿ. ಯವರು ೫೦ ಕೋಟಿ ರೂಪಾಯಿ ನಾವು ಕೊಡುತ್ತೇವೆ ಎಂದು ಹೇಳಿದ್ದಾರೆ. ಮುಂದೆ ಬರತಕ್ಕ ಆನೇ ಪಂಚವಾರ್ಷಿಕ ಯೋಜನೆಯಲ್ಲಿ ಅವರ ಪಾಲು ೫೦ ಕೋಟಿ ರೂಪಾಯಿಗಳು. ಆ ೫೦ ಕೋಟಿ ರೂಪಾಯಿಯಲ್ಲಿ ನಾವು ಬೇರೆ ಬೇರೆ ಪ್ರಾಜೆಕ್ಟ್‌ಗಳಿಗೆ ಹಣವನ್ನು ಒದಗಿಸಬೇಕಾಗಿದೆ ಅದರಲ್ಲಿ ಚಾಮರಾಜನಗರದ್ದೂ ಒಂದು. ಅವರು ಒಪ್ಪಿಕೊಂಡಿದ್ದಾರೆ. ಪ್ಲಾನ್-ಎಸ್ಟಿಮೇಟ್ ಎಲ್ಲ ರೆಡಿಯಾಗಿದೆ. ವಾಟರ್ ಸಪ್ಲೈ ಸೂಯರೇಜ್ ಬೋರ್ಡ್‌ನವರು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಅದು ಈಗ ಕ್ಯಾಬಿನೆಟ್‌ಗೆ ಹೋಗತಕ್ಕ ಸ್ಟೇಜ್‌ನಲ್ಲಿದೆ. ಇದು ಕ್ಯಾಬಿನೆಟ್‌ಗೆ ಬರುವುದಕ್ಕೆ ಮುಂಚೆ ಎಲ್.ಐ.ಸಿ.ಯಿಂದ ಈ ಪ್ರಾಜೆಕ್ಟ್ ಬಗ್ಗೆ ಒಂದು ಫಾರ್ಮಲ್ ಕಮಿಟ್‌ಮೆಂಟ್ ಬರಬೇಕಾಗುತ್ತದೆ. ಏಕೆಂದರೆ, ಹೋದ ಸಾರಿ ಚರ್ಚೆ ಮಾಡಿದ್ದಾಗ ೫೦ ಕೋಟಿ ರೂಪಾಯಿ ಒಟ್ಟಿಗೆ ಕೊಡುತ್ತೇವೆಂದು ಹೇಳಿದರು. ಈಗ ಈ ಪ್ರಾಜೆಕ್ಟಿಗೆ ಸಪರೇಟಾಗಿ ನಾವು ಹಣವನ್ನು ಒದಗಿಸಬೇಕೆಂದು ಕೇಳಿದಾಗ ಶೇಕಡ ೫೦ರಷ್ಟು ಅವರು ಕೊಡಬೇಕಾಗುತ್ತದೆ. ಇನ್ನು ಶೇಕಡ ೫೦ರಲ್ಲಿ ರಾಜ್ಯ ಸರ್ಕಾರ ಮತ್ತು ಮುನಿಸಿ ಪಾಲಿಟಿಯವರು ಹಾಕಿಕೊಳ್ಳಬೇಕಾಗುತ್ತದೆ. ಈ ಶೇಕಡ ೫೦ರಷ್ಟು ಅವರ ಭಾಗ ಏನಿದೆ ಅದಕ್ಕೆ ಒಂದು ಕಮಿಟ್‌ಮೆಂಟ್ ಬರಬೇಕೆಂದು ನಾವು ಕಾಯುತ್ತಿದ್ದೇವೆ. ಅದು ಬಂದ ತಕ್ಷಣ ಕ್ಯಾಬಿನೆಟ್ಟಿಗೆ ಹೋಗುತ್ತದೆ. ಕ್ಯಾಬಿನೆಟ್ ಅಪ್ರೂವಲ್ ಆದ ಮೇಲೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಸಿಗುತ್ತದೆ. ಕೆಲಸ ಕಾರ್ಯಗಳು ಶೀಘ್ರದಲ್ಲಿ ಪ್ರಾರಂಭವಾಗುತ್ತದೆ. ಮಾನ್ಯ ಸದಸ್ಯರು ಇದಕ್ಕೆ ೨೩ ಗ್ರಾಮಗಳು ಸೇರಿರುವುದರಿಂದ ಯಾವ ಯಾವ ಗ್ರಾಮಗಳು ಎಂದು ಅವುಗಳ ಹೆಸರುಗಳನ್ನು ಹೇಳಬೇಕೆಂದು ಕೇಳಿದ್ದರು. ಆ ಗ್ರಾಮಗಳ ಹೆಸರು ಈ ರೀತಿ ಇದೆ.

1. Alagudi with its Hamlets
2. Karahatti
3. Ketahalli
4. Chavalli

5. Kuruburu
6. Muguru
7. Mugurumole
8. Madrahalli
9. Kottagal
10. Banahalli
11. Thelanura
12. Santhemarajalli
13. Kempanapura
14. Hullepura
15. Yedepur
16. Mangala
17. Bohagapur
18. Kirsur
19. Madapur
20. Kadahalli
21. Masgapura
22. Dorayapet
23. Chennipuradamole

ಅಧ್ಯಕ್ಷರು.—ಒಟ್ಟು ಗ್ರಾಮಗಳ ಹೆಸರು ಬಂತಲ್ಲಾ.

ಶ್ರೀ ವಾಟಾಳ್ ನಾಗರಾಜ್.—ತಮಗೆ ನಾನು ಹೇಳುತ್ತಿರುವುದು ಸರಿ, ಮಾನ್ಯ ಸಚಿವರು ಚೆನ್ನಾಗಿ ಆಂಕಿಅಂಶಗಳನ್ನು ಕೊಟ್ಟಿರಿ, ಅವರು ದುಡ್ಡು ಕೊಡುತ್ತಾರೆ, ಇವರು ದುಡ್ಡು ಕೊಡುತ್ತಾರೆ, ಎಲ್ಲರೂ ಕೊಡುತ್ತಾರೆ. ಯಾವತ್ತು ಕಾರ್ಯಗತ ಮಾಡುತ್ತೀರಿ ಎಂಬುದನ್ನು ಹೇಳಿ ? ನೀವು ಹೀಗೆ ಪರಿಶೀಲನೆ ಮಾಡಿಕೊಂಡು ಹೋದರೆ ಇವತ್ತು ಸಭೆ ಮುಗಿಯುತ್ತದೆ, ಇದನ್ನು ನಿಮ್ಮ ಪರಿಶೀಲನೆ ಮತ್ತೊಂದು ಸಾರಿ ಕೇಳಬೇಕಾದರೆ ಇನ್ನು ಮುಂದಿನ ತಿಂಗಳೊ, ಆಚೆ ತಿಂಗಳೊ ಆಲ್ಲಿಯವರೆಗೆ ಆ ಜನಗಳ ಪರಿಸ್ಥಿತಿ ಏನು ? ಈಗ ಕನಿಷ್ಟ ತಾತ್ಕಾಲಿಕವಾಗಿ ಕುಡಿಯುವ ನೀರಿಗೆ ತೊಂದರೆ ಆಗದ ರೀತಿ ಏನು ವ್ಯವಸ್ಥೆ ಮಾಡುತ್ತೀರಿ ? ಹೇಳಿ ಕಾವೇರಿ ಯೋಜನೆ ಬಗ್ಗೆ ಈಗ ನಿಮಗೆಲ್ಲ ಗೊತ್ತಿದೆ. ನಾನು ಪತ್ರಿಕೆಯಲ್ಲಿ ಓದಿದೆ. ತಾವು ಟಿ. ನರಸೀಪುರಕ್ಕೆ ಹೋದಾಗ ಅಲ್ಲಿ ಒಂದು ಆಸ್ಪತ್ರೆ ಉದ್ಘಾಟನೆ ಮಾಡುವಾಗ, ಕಾವೇರಿ ನೀರನ್ನು ಅತಿ ಶೀಘ್ರವಾಗಿ ಕೊಡುತ್ತೇವೆಂದು ಹೇಳಿದಿರಿ. ಅತಿ ಶೀಘ್ರವೆನ್ನುವ ಪದ ತಮ್ಮ ಮನಸ್ಸಿನಲ್ಲಿ ಇದೆಯಲ್ಲ ಯಾವತ್ತು ಅಥವಾ ಒಂದು ದಿವಸ ಮುಂದೆ ಹೇಳಿದರೂ ಚಿಂತೆಯಿಲ್ಲ, ನಮ್ಮ ಸಂತೋಷ ಬರುತ್ತದೆ. ದಯವಿಟ್ಟು ತಾವು ಸದನದಲ್ಲಿ ಹೇಳಿ,

ಶ್ರೀ ಎಂ. ರಾಜಶೇಖರ ಮೂರ್ತಿ.—ನಾನು ಟಿ. ನರಸೀಪುರದಲ್ಲಿ ಒಂದು ಸಮಾರಂಭದಲ್ಲಿ ಭಾಗವಹಿಸಲು ಹೋಗಿದ್ದೆ. ಅಲ್ಲಿ ಮಾನ್ಯ ಮಂತ್ರಿಗಳು ಇದ್ದರು. ಆಗ ಆ ಜನರು ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕೆಂದು ಕೇಳಿದಾಗ ನಾನು ಅತಿ ಶೀಘ್ರದಲ್ಲಿಯೇ ಈ ಕಾರ್ಯವನ್ನು ಕೈಗೊಳ್ಳುತ್ತೇವೆಂದು ಹೇಳಿದ್ದೇನೆ. ಈಗ ನಾನು ಕೊಟ್ಟಿರುವ ಸ್ಟೇಟ್‌ಮೆಂಟನ್ನು ಮತ್ತೆ ಬದಲಾವಣೆ ಮಾಡುವುದಿಲ್ಲ. ವಾಟಾಳ್ ನಾಗರಾಜ್‌ರವರಿಗೆ ಅದೇ ಹೇಳುವುದು, ಅತಿ ಶೀಘ್ರದಲ್ಲಿಯೇ ಆ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡುತ್ತೇವೆ. ನಿಧಾನ ಮಾಡಬೇಕೆಂದು ಏನೂ ಇಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ಈ ಕಾರ್ಯವನ್ನು ಎಷ್ಟು ದಿವಸದಲ್ಲಿ, ಎಷ್ಟು ತಿಂಗಳಲ್ಲಿ ಮಾಡುತ್ತೀರಿ ಎನ್ನುವುದನ್ನು ಹೇಳಿ.

ಶ್ರೀ ಎಂ. ರಾಜಶೇಖರ ಮೂರ್ತಿ.—ಅವರಿಗೆ ಅಲ್ಲಿ ನೀರು ಸರಬರಾಜು ಮಾಡಬೇಕೆಂದೆ ಎಷ್ಟು ಕುತೂಹಲ ಇದೆಯೋ ಅದಕ್ಕಿಂತ ಹೆಚ್ಚು ಕುತೂಹಲ ನನಗೆ ಇದೆ. ಏತಕ್ಕೇದರೆ, ಅದು ನನ್ನ ಹಳೆಯ ಕ್ಷೇತ್ರ. ನೀವು ಹೇಳಿದ ಯಾವ್ಯಾವಜಾಗಗಳಿವೆ ಅದು ನನ್ನ ಹಳೆಯ ಕ್ಷೇತ್ರ. ಅಲ್ಲಿಗೆ ಆದಷ್ಟು ಜಾಗ್ರತೆ ನೀರು ಹೋಗಬೇಕು ಎನ್ನುವುದೇ ನನ್ನ ಉದ್ದೇಶ.

ಶ್ರೀ ಎಂ. ಪಿ ವೆಂಕಟೇಶ್.—ಮಾನ್ಯ ಆರ್ಥಿಕ ಮಂತ್ರಿಗಳು ಯಾವಾಗಲೂ ಸ್ಪಷ್ಟವಾಗಿ ಹೇಳುವುದಿಲ್ಲ. ಆದಷ್ಟು ಶೀಘ್ರ, ಕೊಡಲಿ, ತುರ್ತು ಇಷ್ಟೆ. ಯಾವಾಗ ಮಾಡುತ್ತೀರೆಂಬುದನ್ನು ಹೇಳಿ.

ಶ್ರೀ ವಾಟಾಳ್ ನಾಗರಾಜ್.—ಅತಿ ಶೀಘ್ರವೆಂದರೆ ಎಷ್ಟು ದಿವಸ ಒಂದು ತಿಂಗಳು ಹೆಚ್ಚು ಬೇಕಾದರೆ ತೆಗೆದುಕೊಳ್ಳಿ. ಎಷ್ಟು ದಿವಸದಲ್ಲಿ ಮಾಡುತ್ತೀರೆಂದು ಇಲ್ಲಿ ನಮಗೆ ಹೇಳಿದರೆ ಒಂದು ಗಂಟೆ ನೀರು ಕುಡಿದ ಹಾಗೆ ಆಗುತ್ತದೆ, ದಯವಾಡಿ ಹೇಳಿ.

ಶ್ರೀ ಎಂ. ರಾಜಶೇಖರ ಮೂರ್ತಿ.—ಅತಿ ಶೀಘ್ರದಲ್ಲಿಯೇ ಎಂದರೆ ನಾನು ಏನೂ ನಿಧಾನ ಮಾಡುವುದಿಲ್ಲ. ಬಹುಶಃ ಈ ವರ್ಷ ಮುಗಿಯುವುದರೊಳಗಾಗಿ ಈ ಕೀರ್ಮಾನ ತೆಗೆದಂಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಈಗ ತಾನೆ ವರ್ಷ ಪ್ರಾರಂಭವಾಗಿದೆ. ತಮಗೆ ನಾನು ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬಹಳ ನೋವಿನಿಂದ ಹಾಗೂ ದುಃಖದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇನ್ನು ೧೧ ತಿಂಗಳುಗಳ ಕಾಲ ಜನ ಈ ನರಕಯಾತ್ರೆಯನ್ನು ಪಡುವುದು ಬೇಕಾಗಿಲ್ಲ. ಓಹೋಹೋ ಎನ್ನುವ ತಮಟೆ ಹೊಡೆಯುವ ನಾಟಕ ಬೇಡ. ಅಧ್ಯಕ್ಷರೆ, ನಾನು ಬಹಳ ಹೃದಯಂ ಬಿಚ್ಚಿ ಮಾತನಾಡುತ್ತಿದ್ದೇನೆ. ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಅಲ್ಲಿ ಜನ ಬಹಳ ತೊಂದರೆಯಲ್ಲಿದ್ದಾರೆ. ಇವರಿಗೆ ಒಂದು ವರ್ಷ ಅವಧಿ ಕೊಡಲಿಕ್ಕೆ ನನಗೆ ಸಾಧ್ಯವಿಲ್ಲ. ಈ ಪರಿಸ್ಥಿತಿಯಲ್ಲಿ ನಿಜವಾಗಿಯೂ ಜನ ತೊಂದರೆ ಯಲ್ಲಿದ್ದಾರೆ. ಅತಿ ಶೀಘ್ರವೆಂದರೆ ಒಂದು ವರ್ಷ, ಈ ವರ್ಷ ಮುಗಿಯುವುದರೊಳಗೆ ಮಾಡುತ್ತೇವೆಂದು ತಾವು ದಯವಾಡಿ ಖಂಡಿತವಾಗಿ ಹೇಳಬೇಕು.

ಅಧ್ಯಕ್ಷರು.—ಅವರು ನಿಧಾನ ಮಾಡುವುದಿಲ್ಲವೆಂದು ಹೇಳಿದರು. ಅತಿ ಶೀಘ್ರವಾಗಿ ಮಾಡುತ್ತೇವೆಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್.—ಈ ವರ್ಷದೊಳಗೆ ಅಂದರೆ ಇವತ್ತು ಜನವರಿ ೨೩.....

ಅಧ್ಯಕ್ಷರು.—ಕ್ಯಾಲೆಂಡರ್ ಇಯರೋ, ಫೈನಾನ್ಸಿಯಲ್ ಇಯರೋ, ಅದನ್ನು ಕೇಳಿ.

ಶ್ರೀ ವಾಟಾಳ್ ನಾಗರಾಜ್.—ಅದನ್ನು ಹೇಳಿ.

ಶ್ರೀ ಎಂ. ರಾಜಶೇಖರಮೂರ್ತಿ.—ಆದಷ್ಟು ಈ ವರ್ಷವೇ ಇದಕ್ಕೆ ಮಂಜೂರಾತಿ ಕೊಡುತ್ತೇನೆ. ಮಂಜೂರಾತಿಕೊಟ್ಟಮೇಲೆ ಕೆಲಸ ಪ್ರಾರಂಭ ಮಾಡುತ್ತೇವೆ. ಅಂಗಡಿಯಲ್ಲಿ ಸಾಮಾನು ಕೊಂಡುಕೊಳ್ಳುವುದಾದರೆ, ಇವತ್ತೇ ಹೋಗಿ ತಂದುಕೊಡುತ್ತೇವೆಂದು ಹೇಳಿಬಿಡಬಹುದು. ಇದು ಆ ತರಹ ಅಲ್ಲ. ಇದಕ್ಕೆ ಎಸ್ಟಿಮೇಟ್ ಸ್ಯಾಂಕ್ಷನ್ ಆಗಬೇಕು, ಟೆಂಡರ್‌ಯವರು ಹಣ ಕೊಡಬೇಕು, ಕೆಲಸ ಕಾರ್ಯಗಳು ಪ್ರಾರಂಭವಾಗಬೇಕು. ಆದ್ದರಿಂದ ಇಷ್ಟೇ ದಿನದಲ್ಲಿ ಮಾಡುತ್ತೇವೆಂದು ಹೇಳುವುದ ಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈ ವರ್ಷದ ಆಯುವ್ಯಯದ ಅವಧಿ ಮುಗಿಯುವುದರೊಳಗೆ ಮಾಡುತ್ತೇವೆಂದು ಹೇಳಿ.

ಶ್ರೀ ಎಂ. ರಾಜಶೇಖರಮೂರ್ತಿ.—ಈ ವರ್ಷದೊಳಗೆ ಅಂದರೆ, ೩೧-೩-೧೯೯೦ರೊಳಗೆ ಇದಕ್ಕೆ ಮಂಜೂರಾತಿ ದೊರಕುತ್ತದೆ.

ಅಧ್ಯಕ್ಷರು.—ಈಗ ನಿಯಮ ೬೮ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ. ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಲಿ.